

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

ವಿವಾಹಿತ, 52 ವರ್ಷ. ಕಾಮಕೂಟದಲ್ಲಿ ಹೆಂಡತಿ ನನಗೆ ಎಲ್ಲ ರೀತಿಯಲ್ಲೂ ಸಹಕರಿಸುತ್ತಾಳೆ. ನನಗೆ ಕಾಮೋದ್ರೇಕವಾದರೆ ನಾನು ಮೊದಲು ನನ್ನ ಹೆಂಡತಿಯ ಮೂಗನ್ನು ನನ್ನ ಮೂಗಿನೊಂದಿಗೆ ಉಜ್ಜಬೇಕು, ಅವಳ ಮೂಗಿನ ಹೊಳ್ಳೆಗಳೊಳಗೆ ಬೆರಳಾಡಿಸಬೇಕು. ಅಲ್ಲದೆ ಅವಳ ಮೂಗಿನ ಹೊಳ್ಳೆಗಳಲ್ಲಿ ನನ್ನ ಮೂಗಿನ ಹೊಳ್ಳೆಗಳನ್ನು ಸೇರಿಸಿ ಆಳವಾಗಿ ಉಸಿರು ತೆಗೆದುಕೊಳ್ಳಬೇಕು. ಇದು ಅವಳಿಗೆ ಇಷ್ಟವಾಗದೆ ಚೆನ್ನಾಗಿ ಬೈಯುತ್ತಾಳೆ. ಇದನ್ನೇ ಹಲವು ವೇಶ್ಯೆಯರ ಹತ್ತಿರ ಮಾಡಿ, ಎಂಥ ಹೊಲಸು ಕಾಮುಕನೋ ನಿನ್ನಂಥವರನ್ನು ನೋಡಿಯೇ ಇಲ್ಲ ಎಂದು ಬೈಸಿಕೊಂಡಿದ್ದೇನೆ. ನನ್ನ ಸಂದೇಹ ಏನೆಂದರೆ ಯಾವ ಗಂಡಸೂ ಹೀಗೆ ಮಾಡುವುದೇ ಇಲ್ಲವೇ? ನನ್ನದು ವಿಕೃತ ಕಾಮವೆ?

ತಾನು ಮಾಡುವ ಯಾವುದೇ ಉದ್ದೇಶಪೂರ್ವಕ ಚಟುವಟಿಕೆಯಿಂದ ಸಂಗಾತಿಗೆ ಹಿಂಸೆಯಾಗುತ್ತಿದ್ದಲ್ಲಿ ಅದನ್ನು ವಿಕೃತ ಕಾಮ ಎನ್ನುತ್ತಾರೆ. ನಿಮ್ಮ ಚಟುವಟಿಕೆಯೂ ಅದೇ ಗುಂಪಿಗೆ ಸೇರುತ್ತದೆ. ಸತ್ಯವಾಗಲೂ ಹೇಳಬೇಕೆಂದರೆ ನಾನು ನನ್ನ 35 ವರ್ಷದ ವೃತ್ತಿಯಲ್ಲಿ ಇಂಥದ್ದನ್ನು ಕಂಡಿಲ್ಲ, ಕೇಳಿಲ್ಲ. ಅಷ್ಟಲ್ಲದೆ ನೀವು ಭೇಟಿಕೊಟ್ಟ ಬೆಲೆವೆಣ್ಣುಗಳೂ ಅದನ್ನೇ ಹೇಳಿದ್ದಾರೆ. ಮೂಗಿನ ಹೊಳ್ಳೆಗಳೊಳಗೆ ಬೆರಳಾಡಿಸುವುದು ಸೀನಲು ಕಾರಣವಾಗುತ್ತದೆ. ಆಗ ಗಮನವೆಲ್ಲ ಸೀನನ್ನು ನಿಯಂತ್ರಿಸುವುದಕ್ಕೆ ಮೀಸಲಾಗಿ ಸಂಗಾತಿಗೆ ಕಾಮದ ಭಾವನೆ ಕಡಿಮೆಯಾಗುತ್ತದೆ. ಬೇಡದ ವರ್ತನೆ ತೋರಿಸಿಕೊಳ್ಳುತ್ತ ಬೈಯಿಸಿಕೊಳ್ಳುತ್ತಿದ್ದೀರಿ. ಇನ್ನು ಉಪಾಯ: ಕಾಮವು ಪಾರಸ್ಪರಿಕ ಸುಖವೆಂದು ನೀವು ಭಾವಿಸುವುದಾದರೆ ಈ ದುರಭ್ಯಾಸವನ್ನು ಬಿಡಲೇಬೇಕು. ಮೂಗಿನ ಬದಲಾಗಿ ಹೆಣ್ಣಿನ ಬಾಯಲ್ಲೋ, ಕಂಕುಳ ಸಂದಿನಲ್ಲೋ ಜನನಾಂಗದೊಳಗೋ ಬೆರಳು ಹಾಕಬಹುದು!

ಗಂಡು, 30 ವರ್ಷ, ವಿವಾಹವಾಗಿ 2ವರ್ಷಗಳಾಗಿದ್ದರೂ ಮಕ್ಕಳಾಗಿಲ್ಲ. ವೀರ್ಯಪರೀಕ್ಷೆ ಮಾಡಿಸಿದಾಗ ವೀರ್ಯಾಣುಗಳ ಸಂಖ್ಯೆ ತೀರ ಕಡಿಮೆ ಮತ್ತು ಚಲನೆ ಕಡಿಮೆಯಿದೆ ಎಂದು ಗೊತ್ತಾಗಿದೆ. ನನ್ನ ಬಲ ವೃಷಣವು ನಶಿಸಿ ಹೋಗಿದ್ದು, ಎಡ ವೃಷಣವು ಸರಿಯಾಗಿದ್ದರೂ ವೇರಿಕೋಸ್ ವೈನ್ ಎಂದು ಗೊತ್ತಾಗಿದೆ. ಶಸ್ತ್ರಚಿಕಿತ್ಸೆ ಮಾಡಿದರೆ ವೀರ್ಯಾಣುಗಳ ಸಂಖ್ಯೆ ಹೆಚ್ಚಾಗಬಹುದೆಂದು ವೈದ್ಯರು ಭರವಸೆ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ: 1) ಶಸ್ತ್ರಚಿಕಿತ್ಸೆಯ ನಂತರ ಲೈಂಗಿಕ ದುರ್ಬಲತೆ ಆಗಬಹುದೆ? 2) ಶಸ್ತ್ರಚಿಕಿತ್ಸೆ ಇಲ್ಲದೆ ಮಕ್ಕಳಾಗಬೇಕಾದರೆ ಏನು ಮಾಡಬೇಕು?

ನಿಮಗೆ ಸೂಚಿಸಿರುವ ಶಸ್ತ್ರಚಿಕಿತ್ಸೆಗೂ ಲೈಂಗಿಕ ಸಾಮರ್ಥ್ಯಕ್ಕೂ ಏನೇನೂ ಸಂಬಂಧವಿಲ್ಲ. 2) ಶಸ್ತ್ರಚಿಕಿತ್ಸೆಯಿಲ್ಲದೆ ಮಕ್ಕಳಾಗಬೇಕಾದರೆ ಪ್ರನಾಳ ಶಿಶು ಕ್ರಮಕ್ಕೆ ಹೋಗಬೇಕು. ಇದನ್ನು ನುರಿತ ಸ್ತ್ರೀರೋಗ ತಜ್ಞರು ಮಾಡುತ್ತಾರೆ. ಒಂದುವೇಳೆ ನಿಮ್ಮ ವೀರ್ಯದ ಗುಣಮಟ್ಟವು ಸರಿಯಾಗಿಲ್ಲದಿದ್ದಲ್ಲಿ (ನಿಮ್ಮಿಬ್ಬರ ಒಪ್ಪಿಗೆಯ ಮೇರೆಗೆ) ಅಜ್ಞಾತ ಪುರುಷನ ಆರೋಗ್ಯಕರ ವೀರ್ಯವನ್ನು ನಿಮ್ಮ ಹೆಂಡತಿಯ ಗರ್ಭಕೋಶದಲ್ಲಿ ಸೇರಿಸಲಾಗುತ್ತದೆ. ವಿವರಗಳಿಗಾಗಿ ನಿಮ್ಮ ವೈದ್ಯರನ್ನು ವಿಚಾರಿಸಿ.

ಗಂಡು, 45 ವರ್ಷ, ಅವಿವಾಹಿತ. ನನಗೀಗ ಮದುವೆಯಾಗುವ ಸಂದರ್ಭ ಬಂದಿದೆ. ನಾನು ಈ ವಯಸ್ಸಿನಲ್ಲಿ ಮದುವೆಯಾದರೆ ತಂದೆಯಾಗುವ ಭಾಗ್ಯವಿದೆಯೆ?

ಸಂತಾನಭಾಗ್ಯಕ್ಕೆ ಮದುವೆಯಾಗುವುದು, ಸಂತಾನಹೀನತೆಯನ್ನು ಅನುಭವಿಸುವುದು ದಶರಥನ ಕಾಲಕ್ಕಿಂತಲೂ ಮುಂಚಿನಿಂದ ನಡೆದುಬಂದಿದೆ. ಇಷ್ಟಿದ್ದರೂ ತೊಂಬತ್ತರ ಇಳಿವಯಸ್ಸಿನಲ್ಲೂ ತಂದೆಯಾದವರಿದ್ದಾರೆ. ಹಾಗೆಂದು ತಡವಾಗಿ ಮದುವೆ ಆಗುವವರಿಗೆ ಬಿಡಿ, ತರುಣರ ಬಗೆಗೂ ನಿಖರವಾಗಿ ಹೇಳಲು ಬರುವುದಿಲ್ಲ. ಮಕ್ಕಳಾಗುವ ಸಂಭವ ಇರುವುದು ಗಂಡಹೆಂಡತಿ ಇಬ್ಬರೂ ಆರೋಗ್ಯವಂತರಿದ್ದು ನಿಯಮಿತವಾಗಿ ಸಂಭೋಗಿಸುತ್ತಿದ್ದರೆ ಮಾತ್ರ. ನೀವಿನ್ನೂ ಆ ಹಂತಕ್ಕೆ ಬರದಿರುವುದರಿಂದ ಅದರ ಬಗೆಗೆ ತಲೆ ಕೆಡಿಸಿಕೊಳ್ಳುವುದು ಬೇಡ. ಮುಂದೆ ಒಂದುವೇಳೆ ಗರ್ಭ ಕಟ್ಟದಿದ್ದರೆ ವೈದ್ಯಕೀಯ ಸಹಾಯವಿದ್ದೇ ಇದೆ. ಆದರೆ ಮುಖ್ಯವಾದ ಮಾತೆಂದರೆ ಮದುವೆಯ ಉದ್ದೇಶವು ಸಂತಾನಪ್ರಾಪ್ತಿಯಲ್ಲ, ಕಾಮತೃಪ್ತಿ ಹಾಗೂ ಸಾಂಗತ್ಯ. (ಗರ್ಭಿಣಿಯಾದರೆ ಅದು ಔಷಧಿ ತೆಗೆದುಕೊಳ್ಳುವಾಗ ಆಗುವ ಅಡ್ಡಪರಿಣಾಮದಂತೆ ಅಷ್ಟೆ!) ನಿಮ್ಮನ್ನು ಮದುವೆಯಾಗಲಿರುವ ಹುಡುಗಿಗೂ ವಯಸ್ಸು ಹೆಚ್ಚಾಗಿರುವ ಸಂಭವ ಇರುವುದರಿಂದ ಆಕೆಗೆ ದಾಂಪತ್ಯವು ಅನಿವಾರ್ಯ ಅಗತ್ಯವಾಗಿ ಕಂಡಿದೆಯೇ ವಿನಾ ಸಂತಾನವಲ್ಲ. ಕೊನೆಯದಾಗಿ, ಗಂಡಿನ ಸಂತಾನೋತ್ಪತ್ತಿಯ ಅರ್ಹತೆಯನ್ನು ಸರಳವಾದ ವೀರ್ಯಪರೀಕ್ಷೆಯ ಮೂಲಕ ಕಂಡುಹಿಡಿಯಬಹುದು. ಆದರೆ ಹೆಣ್ಣಿನ ಫಲವಂತಿಕೆಯ ಪರೀಕ್ಷೆಯನ್ನು ನಿಯಮಿತ ಸಂಭೋಗದ ಹೊರತೂ ಕಂಡುಹಿಡಿಯಲು ಅಸಂಭವ ಅದೀಗ ಸಾಧ್ಯವೆ ಮತ್ತು ಸಾಧುವೆ? ಆದುದರಿಂದ ಸಂತಾನದ ಯೋಚನೆಯನ್ನು ಬದಿಗಿಟ್ಟು ಸಾಂಗತ್ಯದ ಉದ್ದೇಶಕ್ಕೆ ಪುಷ್ಟಿ ಕೊಟ್ಟುಕೊಳ್ಳುವುದಕ್ಕೆ ನಿಮಗೀಗ ಸೂಕ್ತ ಕಾಲ!

ಸ್ತನಗಳನ್ನು ಚೀಪಿದರೆ ದೊಡ್ಡದಾಗುತ್ತವೆ ಎಂದು ಕೇಳಿದ ಪ್ರಶ್ನೆಗೆ ನೀವು ಹಾಗೇನಿಲ್ಲ ಎಂದಿದ್ದೀರಿ. ಆದರೆ ನಮ್ಮ ವಿಷಯದಲ್ಲಿ ಬೇರೆಯಾಗಿದೆ. ನಾವು ಮದುವೆಯಾಗಿ, ನನ್ನಾಕೆಯ ಸ್ತನಗಳನ್ನು ಚೀಪುವುದನ್ನು ಪ್ರಾರಂಭಿಸಿದ ಮೇಲೆ ಅವಳ ಸ್ತನಗಳು ದೊಡ್ಡದಾಗಲು ತೊಡಗಿತು. ಕಿಶೋರಾವಸ್ಥೆಯ ಪಾರಂಭದಲ್ಲಿ ಸ್ತನಗಳು ದೊಡ್ಡದಾಗುವಾಗ ಆಗುತ್ತಿದ್ದ ರೀತಿಯ ನೋವೇ ಆಗತೊಡಗಿತಂತೆ. ಇದೆಲ್ಲ ಅವಳು ಗರ್ಭಿಣಿಯಾಗುವುದಕ್ಕೆ ಮುಂಚೆಯೇ ಆಗಿದೆ. ಆದುದರಿಂದ ಸ್ತನಗಳನ್ನು ಚೀಪಿಸಿಕೊಳ್ಳುವುದರಿಂದ ಅವು ದೊಡ್ಡದಾಗುತ್ತವೆ ಎನ್ನುವುದು ನನ್ನ ಅನುಭವಕ್ಕೆ ಬಂದಿದೆ. ನಿಮ್ಮ ಉತ್ತರ?

ಸ್ತನಗಳ ಗಾತ್ರ ದೊಡ್ಡದಾಗುವುದು ಈ ಕಾರಣಗಳಿಂದ: 1) ಮುಟ್ಟಿನ ದಿನ ಸಮೀಪಿಸಿರುವಾಗ; 2) ಗರ್ಭಿಣಿಯಿರುವಾಗ; 3) ಮೊಲೆಹಾಲಿನ ಉತ್ಪತ್ತಿ ಆಗುವಾಗ; (ಈ ಮೂರು ವಿಷಯಗಳು ಹಾರ್ಮೋನುಗಳ ಪ್ರಭಾವದಿಂದ ಆಗುತ್ತವೆ.) 4) ಕೊಬ್ಬಿನ ಪದಾರ್ಥದ ಸೇವನೆಯಿಂದ ತೂಕ ಹೆಚ್ಚಾಗುತ್ತ ಸ್ತನಗಳಲ್ಲೂ ಕೊಬ್ಬು ಶೇಖರಣೆಯಾಗುವಾಗ; 5) ಕಾಮಕೂಟದಲ್ಲಿ ಕಾಮೋದ್ರೇಕದ ಪ್ರಭಾವದಿಂದ ಸ್ತನಗಳಲ್ಲಿ ರಕ್ತಸಂಚಾರ ಹೆಚ್ಚಾಗುವಾಗ– ಇದು ತಾತ್ಕಾಲಿಕವಾಗಿ ಮಾತ್ರ. ಇನ್ನು ನಿಮ್ಮ ವಿಷಯಕ್ಕೆ ಬಂದರೆ, ದಾಂಪತ್ಯದ ಶುರುವಿನಿದಲೂ ನೀವಿಬ್ಬರೂ ಕಾಮತೃಪ್ತಿಯನ್ನು ಹೊಂದುತ್ತ ಸಂತೃಪ್ತ ಬದುಕು ನಡೆಸುತ್ತಿದ್ದೀರಿ. ಇದರ ಪ್ರಭಾವದಿಂದ ನಿಮ್ಮಾಕೆಯ ತೂಕ ಹೆಚ್ಚಾಗುತ್ತ ಸ್ತನಗಳೂ ದಪ್ಪಗಾಗಿವೆಯಷ್ಟೆ. ಆ ಸಮಯದಲ್ಲಿ ನೀವು ಸ್ತನಗಳನ್ನು ಚೀಪುತ್ತಿದ್ದುದರಿಂದ ಆದರೆ ಪ್ರಭಾವವೆಂದೇ ನಂಬಿದ್ದೀರಿ. (ನನ್ನ ಹೇಳಿಕೆಯಲ್ಲಿ ನಂಬಿಕೆ ಬರದಿದ್ದರೆ ನಿಮ್ಮಾಕೆಯ ಮದುವೆಯ ಮುಂಚಿನ ಮೈತೂಕವನ್ನು ಗರ್ಭಪೂರ್ವ ಮೈತೂಕದೊಂದಿಗೆ ಹೋಲಿಸಿ ನೋಡಿ!) ವೈಜ್ಞಾನಿಕ ಸತ್ಯವೇನೆಂದರೆ ಸ್ತನಗಳನ್ನು ಚೀಪುವಾಗ ಅತಿ ಹೆಚ್ಚೆಂದರೆ ಅವು ಜೋತುಬೀಳಬಹುದೇ ವಿನಾ ಗಾತ್ರದಲ್ಲಿ ದಪ್ಪಗಾಗುವುದಿಲ್ಲ! ಇನ್ನು, ನಿಮ್ಮ ಬುದ್ಧಿಗೊಂದು ಸವಾಲು: ನೀವೊಬ್ಬರೇ ಅಲ್ಲ, ಸಾಮಾನ್ಯವಾಗಿ ಪುರುಷರೆಲ್ಲರೂ ಸಂಗಾತಿಯ ಸ್ತನಗಳನ್ನು ಚೀಪುತ್ತಾರೆ; ಆದರೂ ಚಿಕ್ಕ ಸ್ತನದ ಸಮಸ್ಯೆ ಸಾರ್ವತ್ರಿಕವಾಗಿದೆಯಲ್ಲ, ಇದು ಹೇಗೆ? ನಿಮ್ಮ ಉತ್ತರ?

ವಿದ್ಯಾರ್ಥಿ, 22 ವರ್ಷ. ನನ್ನ ಮುಂದೊಗಲು ಹಿಂದೆ ಸರಿಯುತ್ತಿಲ್ಲ. ನನಗೀಗಲೇ ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿಯಿಲ್ಲ. ಮುಂದೆ ಕಷ್ಟವಾದೀತು ಎಂಬ ಚಿಂತೆ ಕಾಡುತ್ತಿದೆ. ಶಸ್ತ್ರಕ್ರಿಯೆಗಾಗಿ ವೈದ್ಯರ ಬಳಿ ಹೋಗಲು ಮನಸ್ಸಿಲ್ಲ. ಅದಕ್ಕಾಗಿ ನಿಮಗೆ ಗೊತ್ತಿರುವ ಆಯುರ್ವೇದ ಔಷಧಿ ಅಥವಾ ಪರಿಹಾರ ನೀಡಬೇಕೆಂದು ವಿನಂತಿ.

ನಾನು ಆಯುರ್ವೇದ ವೈದ್ಯನಲ್ಲವಾದುದರಿಂದ ಅದರ ಬಗೆಗೆ ನನಗೇನೂ ತಿಳಿದಿಲ್ಲ. ತಜ್ಞ ಆಯುರ್ವೇದ ವೈದ್ಯರ ಹತ್ತಿರ ವಿಚಾರಿಸಲಾಗಿ ಮುಂದೊಗಲಿನ ಬಿಗಿತಕ್ಕೆ ಔಷಧಿ ಇಲ್ಲವೆಂದೂ, ಶಸ್ತ್ರಚಿಕಿತ್ಸೆಯೇ ಕಾಯಂ ಪರಿಹಾರವೆಂದೂ ಅವರು ತಿಳಿಸಿದ್ದಾರೆ. ಆದರೂ ಇನ್ನೊಂದು ಉಪಾಯವಿದೆ: ಸಂಭೋಗದಲ್ಲಿ ಕಾಂಡೋಮ್ ಬಳಸಿದರೆ ಮುಂದೊಗಲಿನ ಹಿಂದೆಳೆತವನ್ನು ತಡೆಯಬಹುದು. ನಂತರ ಸಂತಾನೋತ್ಪತ್ತಿಯ ಅಭಿಲಾಷೆಯಾದಾಗ (ಅಥವಾ ಕಾಂಡೋಮ್ ಬಳಕೆ ಬೇಸರವೆನ್ನಿಸಿದಾಗ) ನೀವೇ ಶಸ್ತ್ರಕ್ರಿಯೆಗೆ ತಯಾರಾಗುವಿರಿ!

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿಯ ಸಂಖ್ಯೆ (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿಯ ಸಂಪರ್ಕ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ